## ಉತ್ತರ

ಅ) ರಾಜ್ಯದಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲೂ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗುತ್ತದೆ.

ಆ) ದಿನಾಂಕ: 1-4-2002 ರಿಂದ

ಇ) ಪುರಸಭೆಗಳಿಂದ ರೂ.1,313.37 ಲಕ್ಷಗಳು

ಪಟ್ಟಣ ಪಂಚಾಯತಿಗಳಿಂದ ರೂ.620.96 ಲಕ್ಷಗಳು

ದಿನಾಂಕ 31-3-2001ರ ಅಂತ್ಯದವರೆಗೆ

ಈ) ಸ್ವಯಂ ಆಸ್ತಿ ತೆರಿಗೆ ಪದ್ಧತಿಯ ಈಗಿನ ಆಸ್ತಿ ತೆರಿಗೆ ವಸೂಲಾತಿಯ ಎರಡರಷ್ಟು ತೆರಿಗೆ ಸಂಗ್ರಹವಾಗುವುದೆಂದು ನಿರೀಕ್ಷಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ವಿದ್ಯುದೀಕರಣಕ್ಕಾಗಿ ಗುರುತಿಸಲಾಗಿರುವ ಉಪಗ್ರಾಮಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 948(1253)

**ಸದಸ್ಯರ ಹೆಸರು: ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ)**

## ಪ್ರಶ್ನೆ

ಅ) ವಿದ್ಯುದ್ದೀಕರಣಕ್ಕಾಗಿ ಉಡುಪಿ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಉಪ ಗ್ರಾಮಗಳ ಸಂಖ್ಯೆ ಎಷ್ಟು?

ಆ) ಎಷ್ಟು ಗ್ರಾಮಗಳಿಗೆ ಈಗಾಗಲೇ ವಿದ್ಯುದ್ದೀಕರಣಗೊಳಿಸಲಾಗಿದೆ? ಬಾಕಿ ಗ್ರಾಮಗಳಿಗೆ ಎಂದಿನಿಂದ ವಿದ್ಯುದ್ದೀಕರಣಗೊಳಿಸಲು ಕ್ರಮ ಜರುಗಿಸಲಾಗುವುದು?

ಇ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಗುರುತಿಸಲಾಗಿರುವ ಉಪ ಗ್ರಾಮಗಳ ಸಂಖ್ಯೆ ಎಷ್ಟು? ಎಷ್ಟು ಉಪ ಗ್ರಾಮಗಳಿಗೆ ವಿದ್ಯುದೀಕರಣ ಸೌಲಭ್ಯವನ್ನು ಒದಗಿಸಲಾಗಿದೆ. ಉಳಿದವುಗಳಿಗೆ ಎಂದಿನಿಂದ ಸೌಲಭ್ಯವನ್ನು ಒದಗಿಸಲಾಗುವುದು?

**ಉತ್ತರಿಸುವ ಸಚಿವರು: ಶ್ರೀ ವೀರಕುಮಾರ ಅ. ಪಾಟೀಲ್(ಇಂಧನ ರಾಜ್ಯ ಸಚಿವರು)**

## ಉತ್ತರ

ಅ) ಉಡುಪಿ ಜಿಲ್ಲೆಯಲ್ಲಿ 105 ಉಪ ಗ್ರಾಮಗಳನ್ನು ವಿದ್ಯುದ್ದೀಕರಣಕ್ಕಾಗಿ ಗುರುತಿಸಲಾಗಿದೆ.

ಆ) ಉಡುಪಿ ಜಿಲ್ಲೆಯಲ್ಲಿ 3 ಉಪ ಗ್ರಾಮಗಳು ವಿದ್ಯುದ್ದೀಕರಿಸಲಾಗಿದ್ದು, ಉಳಿದ ಉಪ ಗ್ರಾಮಗಳು ವಿದ್ಯುದೀಕರಣ ವಿವಿಧ ಹಂತದಲ್ಲಿದ್ದು, ಅದರ ಸಂಕ್ಷಿಪ್ತ ಮಾಹಿತಿ ಈ ಕೆಳಕಂಡಂತಿದೆ.

1. 6 ಉಪಗ್ರಾಮಗಳ ಕೆಲಸ ಪ್ರಗತಿಯಲ್ಲಿದೆ.

2. 8 ಉಪಗ್ರಾಮಗಳ ವಿದ್ಯುದೀಕರಣಕ್ಕೆ ಮಂಜೂರಾತಿ ದೊರಕಿದ್ದು, ಕೆಲಸ ಕೈಗೆತ್ತಿಕೊಳ್ಳಬೇಕಾಗಿದೆ.

3. 12 ಉಪ ಗ್ರಾಮಗಳ ವಿದ್ಯುದೀಕರಣಕ್ಕೆ ಮಂಜೂರಾತಿ ಕ್ರಮ ತೆಗೆದುಕೊಳ್ಳಲಾಗಿದೆ.

4. 76 ಉಪ ಗ್ರಾಮಗಳನ್ನು 'ಟಸ್ಕ್ ಕೀ' ಆಧಾರದ ಮೇಲೆ ವಿದ್ಯುದೀಕರಣಗೊಳಿಸಲು ಮಂಜೂರಾತಿಗಾಗಿ ಪೂರ್ವ ರಚನಾ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ 13 ಉಪ ಗ್ರಾಮಗಳನ್ನು ವಿದ್ಯುದೀಕರಣಕ್ಕಾಗಿ 2001-02ನೇ ಸಾಲಿನಲ್ಲಿ ಗುರುತಿಸಲಾಗಿದೆ. ಅದರಲ್ಲಿ 2 ಉಪ ಗ್ರಾಮಗಳ ಕಾಮಗಾರಿಯು ಮಂಜೂರಾಗಿ ಕೆಲಸ ಪ್ರಗತಿಯಲ್ಲಿದ್ದು, ಮಾರ್ಚ್-2002ರೊಳಗೆ ವಿದ್ಯುದೀಕರಿಸಲಾಗುವ ನಿರೀಕ್ಷೆ ಇದೆ. ಉಳಿದ 11 ಉಪಗ್ರಾಮಗಳ ವಿದ್ಯುದೀಕರಣಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿಗಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯ ಸರ್ಕಾರದ ವಿಮಾ ಇಲಾಖೆಯಲ್ಲಿ ವಿತರಣೆ ಮಾಡದೆ ಉಳಿದಿರುವ ಪಾಲಿಸಿದಾರರ ಹಣದ ಮೊತ್ತ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 949(1080)

**ಸದಸ್ಯರ ಹೆಸರು: ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ)**

## ಪ್ರಶ್ನೆ